ನಿಧಿಯಿಂದ ಅದಕ್ಕೆ ಬೇಕಾದಂಥ ಹಣವನ್ನು ಒದಗಿಸುವುದಾದರೆ ಆ ಮಾರ್ಗದರ್ಶಿ ಸೂಚಿಯಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಟ್ಟರೆ ನಾವು ಅದನ್ನು ಒಳಪಡಿಸಲಿಕ್ಕೆ ಪ್ರಯತ್ನಪಡುತ್ತೇವೆ. ಅದೇ ರೀತಿ ಅನೇಕ ಜನ ಸಂಸತ್ ಸದಸ್ಯರು ಈ ಮಾಹಿತಿ ತಂತ್ರಜ್ಞಾನ ಅಳವಡಿಕೆಗೆ, ಗಣಕೀಕರಣಕ್ಕೆ ಹಣ ಕೊಡುತ್ತೇವೆಂದು ಹೇಳಿ ಕೊಟ್ಟಿದ್ದರು. ಆದರೆ ಮಾರ್ಗಸೂಚಿಯಲ್ಲಿ ಅದಕ್ಕೆ ಅವಕಾಶವಿಲ್ಲವೆಂದು ಜಿಲ್ಲಾಧಿಕಾರಿಗಳು ಅದನ್ನು ಹಿಂದಕ್ಕೆ ಕಳುಹಿಸಿದ್ದಾರೆ. ಆದ್ದರಿಂದ ಸರ್ಕಾರ ಸಂಸತ್ ಸದಸ್ಯರ ಹಣವನ್ನು ಉಪಯೋಗಿಸಲು ಮಾಹಿತಿ ತಂತ್ರಜ್ಞಾನ ಇಲಾಖೆ ಮೂಲಕ ಅಥವಾ ಸಂಸತ್ ಸದಸ್ಯರ ಮಾರ್ಗಸೂಚಿಯಲ್ಲಿ ಈ ಬಗ್ಗೆ ಬದಲಾವಣೆ ತರಲಿಕ್ಕೆ ಪ್ರಯತ್ನಪಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಸ್ವಾಗತಾರ್ಹವಾಗಿದೆ. ರಾಜ್ಯಸರ್ಕಾರದ ಉದ್ದೇಶ ಏನೆಂದರೆ, ಈ 'ಇ-ಆಡಳಿತ' ಇನ್ನೂ ಹೆಚ್ಚು ಕ್ಷೇತ್ರಗಳಿಗೆ ವಿಸ್ತರಿಸಬೇಕು, ಮತ್ತು ಇನ್ನೂ ಹಲವಾರು ವೆಬ್‌ಸೈಟ್‌ಗಳನ್ನು ನಿರ್ಮಾಣ ಮಾಡಬೇಕು, ಅದಕ್ಕೆ ಇತ್ತೀಚೆಗೆ ತಾನೇ 'ಇ-ಆಡಳಿತ ಇಲಾಖೆಯನ್ನು' ನಾವು ಪ್ರಾರಂಭ ಮಾಡಿರತಕ್ಕಂಥ ಉದ್ದೇಶವೇನೆಂದರೆ, ಈ 'ಇ-ಆಡಳಿತ' ಕ್ಕೆ ಹೆಚ್ಚು ಒತ್ತು ಕೊಡಬೇಕು, ನಮ್ಮ 'ಭೂಮಿ', 'ಖಜಾನೆ', 'ಕಾವೇರಿ' ಈ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿರತಕ್ಕಂಥ ಕಾರ್ಯಕ್ರಮಗಳಾಗಿವೆ. ಈ ಕಾರ್ಯಕ್ರಮಗಳು ನಮಗೆ ಒದಗಿಸಿಕೊಟ್ಟಿರತಕ್ಕಂಥ ಅನುಭವದ ಹಿನ್ನೆಲೆಯಲ್ಲಿ, ಇದರ ಆಧಾರದ ಮೇಲೆ ಇಡೀ ರಾಜ್ಯದಲ್ಲಿ 'ಇ-ಆಡಳಿತ' ಕರ್ನಾಟಕ ರಾಜ್ಯದಲ್ಲಿ ಪ್ರಾರಂಭವಾಗದೆ ಇನ್ನು ಎಲ್ಲಿಯೂ ಪ್ರಾರಂಭವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರು ಈ ವಿಚಾರದಲ್ಲಿ ತಮ್ಮದೇ ಆದಂಥ ಪರಿಣತಿಯನ್ನು ಪಡೆದಿದ್ದಾರೆ ಎನ್ನತಕ್ಕಂಥದ್ದು ಸರ್ಕಾರಕ್ಕೆ ಗೊತ್ತಿದೆ. ಅವರ ಸಲಹೆಗಳನ್ನು ನಾವು ಸ್ವಾಗತಿಸುತ್ತೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಸರ್ಕಾರದ ಕಾರ್ಯಕ್ರಮದ ಬಗ್ಗೆ ಹಲವಾರು ಇಲಾಖೆಗಳು ಆಯಾಯ ಇಲಾಖೆಯ ವೆಬ್ ಸೈಟ್ ಗಳನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಆದರೆ ಅದನ್ನು ಆಗಿಂದಾಗ್ಗೆ ಅಪ್-ಟು-ಡೇಟ್ ಮಾಡಲಿಲ್ಲ. 2 ವರ್ಷದ ಹಿಂದೆ ತಂದ ವೆಬ್‌ಸೈಟ್ ಅದೇ ರೀತಿ ಮುಂದುವರಿಯುತ್ತಿದೆ. ಅದನ್ನು ಆಗಿಂದಾಗ್ಗೆ ಅಪ್-ಟು-ಡೇಟ್ ಮಾಡುವಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಕೇಳಿಕೋಳ್ಳುತ್ತೇನೆ. ಅದರ ಜೊತೆಗೆ ಯಾವ ಇಲಾಖೆಗಳು ವೆಬ್ ಸೈಟ್ ಮಾಡಲಿಲ್ಲ ಆ ಇಲಾಖೆಗಳು ವೆಬ್ ಸೈಟ್ ಅನ್ನು ಮಾಡಿ ಸರ್ಕಾರದ ಕಾರ್ಯಕ್ರಮದ ಪಾರದರ್ಶಕತೆಯನ್ನು ಪ್ರದರ್ಶಿಸಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಒಪ್ಪತಕ್ಕಂಥ ಸಲಹೆ.

ಮೈಸೂರು ನಗರದ ನ್ಯಾಯಾಲಯ ಕಟ್ಟಡಗಳ ಅಭಿವೃದ್ಧಿ

358 (2761) : **ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.** (ಚಾಮರಾಜಕ್ಷೇತ್ರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿನ ನ್ಯಾಯಾಲಯದ ಆವರಣದಲ್ಲಿರುವ ಕಟ್ಟಡಗಳು ಎಷ್ಟು? ಈ ಕಟ್ಟಡಗಳ ಪೈಕಿ ಯಾವ ಯಾವ ಕಟ್ಟಡಗಳನ್ನು ಯಾವ ಯಾವ ವರ್ಷಗಳಲ್ಲಿ ನಿರ್ಮಿಸಲಾಗಿದೆ (ವಿವರ ನೀಡುವುದು)

ಆ) ಈ ಕಟ್ಟಡಗಳ ಅಭಿವೃದ್ಧಿ ಬಗ್ಗೆ ಹಾಗೂ ನವೀಕರಣದ ಬಗ್ಗೆ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಣ ವೆಚ್ಚ ಮಾಡಲಾಗಿದೆ.

ಇ) ಈ ಕಟ್ಟಡಗಳ ಅಭಿವೃದ್ಧಿಗೆ ನವೀಕರಣವನ್ನು ಸಂಪೂರ್ಣ ಪ್ರಮಾಣದಲ್ಲಿ ಕೈಗೊಳ್ಳಲು ಆಗುವ ವೆಚ್ಚ ಎಷ್ಟು? ಈ ಕಟ್ಟಡಗಳ ಅಭಿವೃದ್ಧಿ ಕಾರ್ಯ ಕಾಮಗಾರಿಯನ್ನು ಈ ಕೂಡಲೇ ಕೈಗೊಳ್ಳಬೇಕೆಂಬ ವಿಚಾರದಲ್ಲಿ ಸರ್ಕಾರ ಯಾವ ಕ್ರಮವನ್ನು ಹಮ್ಮಿಕೊಂಡಿದೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅ) ಮೈಸೂರು ನಗರ ನ್ಯಾಯಾಲಯದ ಆವರಣದಲ್ಲಿ ಒಟ್ಟು 15 ಕಟ್ಟಡಗಳಿವೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ರೂ. 27.14 ಲಕ್ಷಗಳು

ಇ) ಈವರೆವಿಗೂ ಯಾವುದೇ ಪ್ರಸ್ತಾವನೆಯನ್ನು ಸ್ವೀಕರಿಸಲಾಗಿರುವುದಿಲ್ಲ.

ಅನುಬಂಧ

ಮೈಸೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಕಟ್ಟಡಗಳ ವಿವರ

ಕ್ರಮ ಸಂಖ್ಯೆ	ಕಟ್ಟಡಗಳ ಹೆಸರು	ನಿರ್ಮಿಸಲಾದ ವರ್ಷ
1	ಜಿಲ್ಲಾ ನ್ಯಾಯಾಲಯ ಮುಖ್ಯ ಕಟ್ಟಡ	1895
2	ಅಡಿಷನಲ್ ಮುನ್ಸೀಫ್ ಕಟ್ಟಡ	1975
3	ಫ್ಯಾಮಿಲಿ ಕೋರ್ಟ್	1975
4	ಸಿಬ್ಬಂದಿ ವರ್ಗದ ಶೌಚಾಲಯ	1975
5	ಸೆಂಟ್ರಲ್ ಕಾರ್ಡ್ ರೂಂ	1975
6	ಅಡ್ವೊಕೇಟ್ಸ್ ಕ್ಲಬ್	1975
7	ಎರಡನೇ ಮುನ್ಸೀಫ್ ಕೋರ್ಟ್	1975
8	ಹಳೇ ಬಾರ್ ಅಸೋಸಿಯೇಷನ್ (6ನೇ ಅಡಿಷನಲ್ ಕೋರ್ಟ್)	1975
9	ಗ್ಯಾರೇಜ್	1975
10	ಬೆರಾಕ್ಸ್ ರೂಂ ಮತ್ತು ಟೈಪಿಂಗ್ ಹಾಲ್	1975
11	ಕ್ಯಾಂಟೀನ್	1975
12	ಪೋಸ್ಟ್ ಆಫೀಸ್	1975
13	ಬ್ಯಾಂಕ್ ಬಿಲ್ಡಿಂಗ್	1975
14	ಜಿಲ್ಲಾ ನ್ಯಾಯಾಲಯದ ಕ್ಯಾಂಟೀನ್	1940
15	ಹೊಸ ಜಿಲ್ಲಾ ನ್ಯಾಯಾಲಯ ಮತ್ತು ಬಾರ್ ಅಸೋಸಿಯೇಷನ್ ಕಟ್ಟಡ	1989

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಮೈಸೂರು ನಗರದಲ್ಲಿನ ನ್ಯಾಯಾಲಯದ ಆವರಣದಲ್ಲಿರುವ ಕಟ್ಟಡಗಳ ನವೀಕರಣ ಈವರೆಗೆ ಪೂರ್ತಿ ಆಗಿದೆಯೇ? ಇದಕ್ಕೆ ಎಷ್ಟು ಹಣ ಖರ್ಚಾಗಿದೆ? ಮತ್ತು ಸಂಪೂರ್ಣವಾಗಿ ಕಟ್ಟಡದ ಅಭಿವೃದ್ಧಿಗೆ ಕಾಮಗಾರಿಯನ್ನು

ಕೈಗೊಳ್ಳುವಂಥ ವಿಚಾರ ಸರ್ಕಾರದ ಮಟ್ಟದಲ್ಲಿ ಇದೆಯೇ ಎನ್ನುವ ಪ್ರಶ್ನೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಆಗಲೀ ಉತ್ತರದಲ್ಲಿ ಹೇಳಿದ್ದೇನೆ. ಮೈಸೂರು ನಗರ ನ್ಯಾಯಾಲಯದ ಆವರಣದಲ್ಲಿ ಸುಮಾರು 15 ಕಟ್ಟಡಗಳು ಇವೆ. ಅವರಲ್ಲಿ ಕೆಲವು ಕಟ್ಟಡಗಳಿಗೆ 100 ವರ್ಷ ಆಗಿದೆ, ಇನ್ನು ಕೆಲವು ಕಟ್ಟಗಳಿಗೆ 30 ವರ್ಷಗಳಾಗಿವೆ, ಮತ್ತೆ ಇನ್ನು ಕೆಲವು ಕಟ್ಟಡಗಳಿಗೆ 40–42 ವರ್ಷಗಳಷ್ಟಾಗಿವೆ. ಇನ್ನು ನವೀಕರಣದ ಬಗ್ಗೆ, ಅಭಿವೃದ್ಧಿ ಬಗ್ಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ರೆಗ್ಯುಲರ್ ಮೆಯಿಂಟೆನೆನ್ಸ್ ಗೋಸ್ಕರವಾಗಿ ಸುವಾರು ರೂ. 27 ರಿಂದ 28 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ ಈ ಕಟ್ಟಡಗಳನ್ನು ಅಭಿವೃದ್ಧಿ, ನವೀಕರಿಸಬೇಕೆನ್ನುವ ಸಲಹೆ ಏನಿದೆ ಇದನ್ನು ನಾನು ನಮ್ಮ ಇಲಾಖೆಯಿಂದ ಪಿ.ಡಬ್ಲ್ಯೂಡಿ ಇಲಾಖೆಗೆ ಬರೆದು ಅಲ್ಲಿ ಅವರ ಮಾಹಿತಿಯನ್ನೆಲ್ಲಾ ಸಂಗ್ರಹಿಸಿ ಇದನ್ನು ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಅಪೂರ್ಣವಾಗಿರತಕ್ಕಂಥ ಕೆಲಸವನ್ನು ಎಷ್ಟು ದಿನಗಳಲ್ಲಿ ಮುಗಿಸುತ್ತಾರೆ ಎನ್ನುವುದನ್ನು ಕೇಳಬಯಸುತ್ತೇನೆ. ಒಂದು ವರ್ಷದಲ್ಲಿ ಮುಗಿಸುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಅಪೂರ್ಣ ಅಂದರೆ ಯಾವುದು ಇದೆ ಎನ್ನುವುದನ್ನು ಸ್ಪೆಸಿಫಿಕ್ ಆಗಿ ಹೇಳಿದರೆ ಒಳ್ಳೆಯದು. ಅಲ್ಲಿ 15 ಕಟ್ಟಡಗಳು ಇವೆ. ಅಪೂರ್ಣ ಎಂದರೆ ಯಾವುದು ಎನ್ನವುದನ್ನು ಸ್ಪೆಸಿಫಿಕ್ ಆಗಿ ಹೇಳಿದರೆ ಅದನ್ನು ನಾನು ನೋಡಿ ಹೇಳಬಹುದು. ಜನರಲ್ ಆಗಿ ಪ್ರಶ್ನೆಯನ್ನು ಕೇಳಿದರೆ ಹೇಗೆ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಎಲ್ಲವೂ ಚೌಚೌ ಬಾತ್ ತರಹ ಅರ್ಧಕ್ಕೆ ಮಾತ್ರ ಕೆಲಸ ಮಾಡಿ ನಿಲ್ಲಿಸಿದ್ದಾರೆ. ಆ ನ್ಯಾಯಾಲಯದಲ್ಲಿ ಕುಳಿತುಕೊಳ್ಳಲಿಕ್ಕೆ ಜಾಗವಿಲ್ಲ, ಅಲ್ಲಿ ಬಹಳ ಕೆಟ್ಟ ಪರಿಸ್ಥಿತಿ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಏನು ಹೇಳಿದೆನೆಂದರೆ, ಇಲ್ಲಿ ರಾಜ್ಯಸರ್ಕಾರ, ಉಚ್ಚನ್ಯಾಯಾಲಯ, ಪಿ.ಡಬ್ಲ್ಯೂ.ಡಿ ಇಲಾಖೆ ಇವುಗಳ ಮಧ್ಯೆ ಸಂಬಂಧ ಮತ್ತು ಸಂಪರ್ಕ ಎರಡನ್ನೂ ಏರ್ಪಡಿಸಬೇಕು. ಮೈಸೂರಿನಲ್ಲಿರುವ ನ್ಯಾಯಾಲಯದ ಆವರಣದಲ್ಲಿರುವ ಕಟ್ಟಡಗಳು ಈಗಿನದು ಅಲ್ಲ. ಇದು ಮೈಸೂರು ಸಂಸ್ಥಾನದ ಕಾಲದಿಂದಲೂ ಆ ಕೋರ್ಟ್‌ಗಳು ನಡೆಯುತ್ತಾ ಇವೆ. ಆದ್ದರಿಂದ ಇದರ ರಿಪೇರಿಗೆ ಎಷ್ಟು ಖರ್ಚು ಮಾಡಬೇಕು, ಯಾವಾಗ ಮಾಡುತ್ತೀರಿ ಎಂದು ಈ ತಕ್ಷಣವೇ ಹೇಳಿ ಎಂದು ಕೇಳಿದರೆ ಉತ್ತರ ಹೇಳುವುದು ಕಷ್ಟ. ನಾನು ಮಾಹಿತಿ ತರಿಸಿ ನಿಮಗೆ ವಿವರವನ್ನು ಕೊಡುತ್ತೇನೆ.

ಸ್ತ್ರೀ ಶಕ್ತಿ ಯೋಜನೆಯನ್ನು ನಗರ ಪ್ರದೇಶಗಳಿಗೆ ವಿಸ್ತರಿಸುವುದು

402 (3654) : ಶ್ರೀ ಸಭಾಪತಿ ಯು.ಆರ್. (ಉಡುಪಿ), : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ತ್ರೀಶಕ್ತಿ ಯೋಜನೆಯನ್ನು ನಗರ ಪ್ರದೇಶಗಳಿಗೆ ವಿಸ್ತರಿಸುವ ಬಗ್ಗೆ ಸರ್ಕಾರದ ನಿಲುವೇನು;